ಹೈಸ್ಕೂಲಿಗೇ ವಿದ್ಯಾಭ್ಯಾಸ ನಿಲ್ಲಿಸುವಂತೆ ಮಾಡಿದ್ದರು ಅಪ್ಪ. ಅಷ್ಟೇ ಅಲ್ಲ ವಯಸ್ಸಾಗುತ್ತಿದ್ದ ತನಗೆ ಸಹಾಯ ಮಾಡಲು ಒಬ್ಬ ಮನೆಯಲ್ಲಿ ಬೇಕೇ ಬೇಕು ಎನ್ನುತ್ತ ತನ್ನನ್ನು ಹೊರ ಹೋಗಲೂ ಬಿಟ್ಟಿರಲಿಲ್ಲ. ಹಾಗೆಲ್ಲಾದರೂ ಬಿಟ್ಟಿದ್ದರೆ ಬೆಂಗಳೂರಿನಲ್ಲಿ ಹೋಟೆಲಿಟ್ಟಿದ್ದ ಊರಿನವರು ಯಾರದಾದರೂ ಜೊತೆಯಲ್ಲಿ ಹೋಗಿ ಹಗಲಿಡೀ ಅವರ ಹೋಟೆಲಿನಲ್ಲಿ ಕೆಲಸ ಮಾಡುತ್ತ ಸಂಜೆ ಕಾಲೇಜಿಗೆ ಹೋಗಿಯಾದರೂ ಕಲಿತು ಕೊನೇ ಪಕ್ಷ ಒಂದು ಡಿಗ್ರಿಯನ್ನಾದರೂ ಮಾಡಿಕೊಳ್ಳಬೇಕೆಂಬ ತನ್ನ ಆಸೆಗೂ ಕಲ್ಲು ಹಾಕಿದ್ದರು. ಅದೇ ತಮ್ಮ ಕಲಿಯುವುದರಲ್ಲಿ ಅಂತಹ ಹುಷಾರಿಲ್ಲದಿದ್ದರೂ ಬಿಡದೆ ಅವನನ್ನು ಎಂಜಿನಿಯರಿಂಗಿಗೆ ಸೇರಿಸಿದ್ದರು. ಮೆರಿಟ್ ಸೀಟು ಸಿಗುವಷ್ಟು ಮಾರ್ಕನ್ನು ಕನಸಿನಲ್ಲೂ ನಿರೀಕ್ಷಿಸಿರದಿದ್ದ ಅವನಿಗೆ ಸಿಕ್ಕಿದ ಮಾರ್ಕಿಗೆ ಎಲ್ಲೆಲ್ಲಿಂದಲೋ ಸಾಲ ಮಾಡಿ ಖಾಸಗಿ ಕಾಲೇಜಿನಲ್ಲಿ ಸೀಟು ಕೊಡಿಸಿ ಎಂಜಿನಿಯರ್ ಮಾಡಿಸಿದ್ದರು.

ಎಂಜಿನಿಯರ್ ಆಗಿದ್ದೇ ಆ ಮಗನಿಗೆ ಕೋಡು ಮೂಡಿತ್ತು. ಚಿಕ್ಕಂದಿನಿಂದಲೂ ಈ ಅಣ್ಣನಿಗಿಂತ ಹೆಡ್ಡ ತಾನು ಎನ್ನುವ ಕೀಳರಿಮೆಯಲ್ಲಿಯೇ ಬೆಳೆಯುತ್ತಿದ್ದ ಅವನಿಗೆ ಈಗ ತಾನು ಎಂಜಿನಿಯರ್ ಎನ್ನುವ ಅಹಂ ತಲೆಗೇರಿ, ಈ ಅಣ್ಣನನ್ನೂ ತಿರಸ್ಕಾರದಿಂದ ನೋಡಲು ಪ್ರಾರಂಭಿಸಿದ್ದ. ಅದಕ್ಕೆ ಸರಿಯಾಗಿ ಇದೇ ಅಪ್ಪ ಪ್ರಭಾವ ಬೀರಿಯೋ, ಸಂಬಂಧಪಟ್ಟವರಿಗೆ ಒಂದಿಷ್ಟು ದುಡ್ಡು ತಿನ್ನಿಸಿಯೋ ಅವನಿಗೊಂದು ಕೆಲಸ ಸಿಕ್ಕುವಂತೆಯೂ ಮಾಡಿದ್ದರು. ಅದೂ ಎರಡೇ ವರ್ಷ. ಮೂರನೇ ವರ್ಷಕ್ಕೆ ಕಾಲಿಡುತ್ತಿದ್ದಂತೆ ಊರಿಗೆ ಬಂದವ ಮನೆಯಲ್ಲಿ ಬಾಂಬು ಸಿಡಿಸಿದ್ದ. ತನಗೆ ಅಮೆರಿಕದ ಕಂಪೆನಿಯೊಂದರಲ್ಲಿ ಕೆಲಸ ಸಿಕ್ಕಿದೆಯೆಂತಲೂ ಇನ್ನೊಂದೇ ತಿಂಗಳಲ್ಲಿ ಅಲ್ಲಿಗೆ ಹೋಗಬೇಕೆಂತಲೂ ಹೇಳಿದ್ದ. ಈ ಅಣ್ಣನಿಗೆ ಆಶ್ಚರ್ಯ. ಕಷ್ಟಪಟ್ಟು ಅದೂ ಅಪ್ಪನ ಕೃಪೆಯೂ ಸೇರಿ ಎಂಜಿನಿಯರಿಂಗ್ ಪಾಸು ಮಾಡಿದ ಅವನಿಗೆ ಅಷ್ಟು ಸುಲಭದಲ್ಲಿ ಅಮೆರಿಕದಲ್ಲಿ ಕೆಲಸ ಸಿಕ್ಕಿತೇ ಎಂದು. ಆದರೆ, ಅದನ್ನು ಕೇಳುವ ಹಾಗೂ ಇಲ್ಲ. ಇವನೇನೋ ಕೇಳಬಹುದು. ಆದರೆ, ಆ ತಮ್ಮ ಉತ್ತರ ಕೊಡಬೇಕಲ್ಲ. ತಾನು ಎಂಜಿನಿಯರಿಂಗಿಗೆ ಸೇರಿದ ದಿನದಿಂದಲೇ ಈ ಎಸ್ಸೆಸ್ಸೆಲ್ಲಿ ಮಾಡಿ ಮನೆಯಲ್ಲಿಯೇ ಕುಳಿತ ಅಣ್ಣನನ್ನು ಒಂದು ತೆರನ ನಿಕೃಷ್ಟ ಭಾವನೆಯಿಂದ ನೋಡಲು ತೊಡಗಿದ್ದ ಆ ತಮ್ಮನಲ್ಲಿ ಕೆಲಸ ಸಿಕ್ಕಿದ ಮೇಲಂತೂ ಆ ಭಾವನೆ ಬಲವಾಗಿತ್ತು. ಈಗಂತೂ ಕೇಳುವುದೇ ಬೇಡ. ಅಮೆರಿಕಕ್ಕೆ ಹೋಗುತ್ತಿದ್ದೇನೆ ಎನ್ನುವ ಹೆಮ್ಮೆ ಜೊತೆಗೆ ಇನ್ನೇನು ಇವರ ಹಂಗು ಎನ್ನುವ ಒಂದು ಬಗೆಯ ತಿರಸ್ಕಾರವೂ ಸೇರಿತ್ತು. ಅದೂ ಅಲ್ಲದೆ ತನ್ನ ಭವಿಷ್ಯದ ಬಗ್ಗೆ, ತನ್ನ ಮುಂದಿನ ಯೋಜನೆಗಳ ಬಗ್ಗೆ ಹೇಳಿದರೆ ಇವರಿಗೆಲ್ಲ ಎಲ್ಲಿ ಅರ್ಥವಾದೀತು ಎನ್ನುವ ಉದ್ಧಟತನವೂ ಸೇರಿತ್ತು. ಹಾಗಾಗಿ, ಅವರ್‍ಯಾರಿಗೂ ಅದೇನನ್ನೂ ಹೇಳಲೇ ಇಲ್ಲ.

ಬರೀ 'ಅಮೆರಿಕದಲ್ಲಿ ಕೆಲಸ ಸಿಕ್ಕಿದೆ. ಹೋಗುತ್ತಿದ್ದೇನೆ' ಅಷ್ಟೇ! ಅದೂ 'ಒಂದು ತಿಂಗಳ ಒಳಗೆ' ಎಂದೂ ಸೇರಿಸಿದ್ದ.

ತಮ್ಮ ಅಮೆರಿಕಕ್ಕೆ ಹೋದ. ಈ ಅಣ್ಣ ಮಾತ್ರ ಮನೆ, ಗದ್ದೆಗಳಲ್ಲಿ ಕೆಲಸ ಮಾಡಿಕೊಂಡು ಊರಲ್ಲೇ ಉಳಿದಿದ್ದ. ಅಪ್ಪನೂ ಅವನನ್ನು ಹಾಗೆಯೇ ದುಡಿಸಿಕೊಳ್ಳುತ್ತಿದ್ದರು. ಮೊದಲೆಲ್ಲ ಚೂರು ಪಾರು ಕೆಲಸಕ್ಕೂ ಕೆಲಸದವರನ್ನು ಹಾಕಿಕೊಳ್ಳುತ್ತಿದ್ದ ಅಪ್ಪ ಈಗೀಗ ಯಾವ ಕೆಲಸಕ್ಕೂ ಕೆಲಸದವರನ್ನು ಕರೆಯುವುದನ್ನು ಬಿಟ್ಟೇ ಬಿಟ್ಟಿದ್ದರು. ಹಾಗಾಗಿ, ಎಲ್ಲ ಕೆಲಸವೂ ಇವನ ತಲೆಯ ಮೇಲೆ. ಅಂಥದ್ದರಲ್ಲಿಯೂ ಅಪ್ಪ ಕೆಲವೊಮ್ಮೆ ಇವನಿಗೆ ಬಯ್ಯುತ್ತಿದ್ದುದೂ ಇತ್ತು. 'ಅದು ಮಾಡಿದ್ದು ಸರಿಯಾಗಲಿಲ್ಲ ಇದು ಹೀಗೆ ಮಾಡುವುದಲ್ಲ' ಎಂದು ಇವ ಮಾಡಿದ ಕೆಲಸಗಳನ್ನು ನೋಡಿ ದೂರುವುದೂ ಸೇರಿ. ಅವರು ಹಾಗೆ ಹೇಳುವುದನ್ನು ಎಲ್ಲಿಯಾದರೂ ಕೇಳಿಸಿಕೊಂಡ ಅಮ್ಮ ಮುಖ ತಿರುಗಿಸಿ ದುಃಖಿಸುವುದನ್ನು ನೋಡಿದರೆ ಇವನೇ ಅವಳನ್ನು ಸಮಾಧಾನ ಪಡಿಸುತ್ತಿದ್ದ. 'ಇರಲಿ ಅಮ್ಮ.. ತಪ್ಪಾದದ್ದಂತೂ ಹೌದು... ಸರಿ ಮಾಡಿದರಾಯ್ತು... ಬಿಡು' ಎನ್ನುತ್ತಿದ್ದ.

***

ತಮ್ಮ ಅಮೆರಿಕೆಗೆ ಹೋಗಿ ಎರಡು ವರ್ಷ ಕಳೆಯುತ್ತಿದ್ದಂತೆಯೇ ಅವನಿಗೆ ಹೆಣ್ಣು ಕೊಡಲು ಊರಲ್ಲಿ ಮದುವೆ ವಯಸ್ಸಿಗೆ ಬಂದ